## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 706

ಸದಸ್ಯರ ಹೆಸರು : ಶ್ರೀ ಎಂ. ನಾಗರಾಜು (ವಿಧಾನಸಭಾ ಕ್ಷೇತ್ರ)

ಉತ್ತರಿಸುವ ಸಚಿವರು : ತೋಟಗಾರಿಕೆ ಮತ್ತು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಉತ್ತರಿಸಬೇಕಾದ ದಿನಾಂಕ : 23.12.2022

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ತೋಟಗಾರಿಕೆ ಕೃಷಿ ವಿಭಾಗವು ಆರ್ಥಿಕ ದೃಷ್ಟಿಯಿಂದ ದೇಶದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಇಲಾಖೆಯಾಗಿದ್ದು, ಪ್ರಸ್ತುತ ಕಾಲಕಾಲಕ್ಕೆ ಬದಲಾಗುತ್ತಿರುವ ಸಾರ್ವಜನಿಕರ ಜೀವನಶೈಲಿ, ಬೇಡಿಕೆಗಳು ಮತ್ತು ಆದ್ಯತೆಗಳು ಹೆಚ್ಚು ಪೌಷ್ಠಿಕಾಂಶವುಳ್ಳ ಆಧುನಿಕ ಆಹಾರ ಪದ್ಧತಿಯತ್ತ ಹೊರಳುತ್ತಿದ್ದು, ತೋಟಗಾರಿಕೆ ಉತ್ಪನ್ನಗಳು ಮತ್ತು ಅವುಗಳ ರಫ್ತಿನಿಂದ ಅಧಿಕ ಲಾಭಗಳ ಅವಕಾಶಗಳು ವಿಫುಲವಾಗಿರುವುದರಿಂದ ರಾಜ್ಯದಲ್ಲಿ ತೋಟಗಾರಿಕೆ ಕೃಷಿ ಬಗ್ಗೆ ಜನರಲ್ಲಿ ಒಲವು ಹೆಚ್ಚಾಗುತ್ತಿದ್ದು, ಇದನ್ನು ಉತ್ತೇಜಿಸಲು ಕೈಗೊಂಡ ಕ್ರಮವೇನು; | ಕೆಳಕಾಣಿಸಿದ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>1. ರಾಜ್ಯದಲ್ಲಿ ತೋಟಗಾರಿಕಾ ಕೃಷಿಯನ್ನು ಉತ್ತೇಜಿಸಲು, ಇಲಾಖೆ ಯೋಜನೆಗಳಡಿ ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ, ಸಾವಯುವ ಕೃಷಿ, ಹನಿ ನೀರಾವರಿ, ನೀರು ಸಂಗ್ರಹಣಾ ಘಟಕ, ಯಾಂತ್ರಿಕರಣ, ಪುನಶ್ಚೇತನ, ಸಂಸ್ಕರಣೆ, ಮೌಲ್ಯವರ್ಧನೆ, ನರ್ಸರಿ ಸ್ಥಾಪನೆ, ಸಂರಕ್ಷಿತ ಬೇಸಾಯ, ಶೀಥಲ ಗೃಹ ಘಟಕ, ಪ್ಯಾಕ್ ಹೌಸ್ ಘಟಕ, ಶೇಖರಣಾ ಘಟಕ, ಕೊಳವೆ ಬಾವಿ, ಡೀಸಲ್ /ವಿದ್ಯುತ್ ಚಾಲಿತ ಪಂಪ್ ಸೆಟ್, ತೋಟಗಾರಿಕೆ ಬೆಳೆಗಳ ಗುಣಮಟ್ಟದ ಉತ್ಪಾದನೆಗೆ ವಿಶೇಷ ಉತ್ತೇಜನ ಕಾರ್ಯಕ್ರಮಗಳಾದ ನೀರಿನಲ್ಲಿ ಕರಗುವ ರಸಗೊಬ್ಬರ ಘಟಕ, ಲಘು ಪೋಷಕಾಂಶಗಳ ಮಿಶ್ರಣ ಮತ್ತು ಬೆಳೆ ಸ್ಪೆಷಲ್, ಹಣ್ಣಿನ ಗಿಡಗಳ ಮೇಲಾವರಣ ನಿರ್ವಹಣೆ, ಬೆಳೆ/ ಹಣ್ಣು/ ಹೂವು ಹೊದಿಕೆ, ಮಾರುಕಟ್ಟೆ ಮೂಲಭೂತ ಸೌಕರ್ಯಗಳ ನಿರ್ಮಾಣ ಮುಂತಾದವು ಅಭಿವೃದ್ಧಿಪರ ಘಟಕಗಳಿಗೆ ಸಹಾಯಧನ ನೀಡಲಾಗುತ್ತಿದೆ.<br>2. ಈ ಬಗ್ಗೆ ಹೋಬಳಿ ಮಟ್ಟದ ಅಧಿಕಾರಿಗಳು ಗ್ರಾಮಸಭೆಗಳಲ್ಲಿ ಮಾಹಿತಿ ನೀಡುತ್ತಿದ್ದು, ಇಲಾಖಾ ವೆಬ್ ಸೈಟ್, ರೇಡಿಯೋ, ದೂರದರ್ಶನ, ಕರಪತ್ರಗಳ ಮೂಲಕ ಪ್ರಚಾರ ಕೈಗೊಳ್ಳಲಾಗುತ್ತಿದೆ.<br>3. ಆಧುನಿಕ ರೀತ್ಯಾ ಬದಲಾವಣೆಗಳ ತಾಂತ್ರಿಕ ಮಾಹಿತಿಯ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಮಾಸಿಕ ತಾಂತ್ರಿಕ ಕೈಪಿಡಿ ಹಾಗೂ ರೈತ ಉತ್ಪಾದಕಾ ಸಂಸ್ಥೆ, ಉತ್ಕೃಷ್ಟ ಕೇಂದ್ರ, ರಾಜ್ಯ ಮತ್ತು ಕೇಂದ್ರ ಸಂಶೋಧನಾ ಕೇಂದ್ರಗಳಲ್ಲಿ ರೈತರಿಗೆ ತರಬೇತಿ ಹಾಗೂ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲಾಗುತ್ತಿದೆ.<br>4. ರೈತರ ತಾಕುಗಳಿಗೆ ನಿರಂತರವಾಗಿ ಕ್ಷೇತ್ರಭೇಟಿ, ಕೃಷಿ/ತೋಟಗಾರಿಕೆ ಮೇಳ, ಹಾಗೂ ಪ್ರವಾಸಗಳ ಮೂಲಕ ಅಧಿಕಾರಿಗಳು ಸಹ ಮಾಹಿತಿಯನ್ನು ನೀಡುತ್ತಿರುತ್ತಾರೆ. |
| ಆ) | ರಾಜ್ಯವು ಹೆಚ್ಚು ಒಣಭೂಮಿ ಪ್ರದೇಶ ಹೊಂದಿರುವುದು ಕಡಿಮೆ ನೀರನ್ನು ಅವಲಂಬಿಸುವ ತೋಟಗಾರಿಕೆ ಕೃಷಿಗೆ ವರದಾನವಾಗಿದ್ದು, ತೋಟಗಾರಿಕೆ ಕೃಷಿಗೆ ಇಷ್ಟೆಲ್ಲಾ | ರಾಜ್ಯದ ಒಣಭೂಮಿ ಪ್ರದೇಶದಲ್ಲಿ ಕಡಿಮೆ ನೀರನ್ನು ಅವಲಂಬಿಸುವ ತೋಟಗಾರಿಕೆ ಕೃಷಿಗೆ ತೋಟಗಾರಿಕೆ ಇಲಾಖೆಯು ಕೈಗೊಂಡಿರುವ ಕ್ರಮಗಳ ವಿವರ ಈ ಕೆಳಕಂಡಂತಿದೆ.<br>1. ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಹನಿ ನೀರಾವರಿ ಅಳವಡಿಕೆಗೆ ಪರಿಶಿಷ್ಟ ಜಾತಿ ಮತ್ತು |

ನೈಸರ್ಗಿಕ ಅನುಕೂಲಗಳಿರುವ ಕಾರಣ ಇದರ ಅನುಕೂಲ ಪಡೆಯಲು ತೋಟಗಾರಿಕೆ ಇಲಾಖೆಯು ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)

ಪರಿಶಿಷ್ಟ.ಪಂಗಡ ರೈತ ಕುಟುಂಬಗಳಿಗೆ 2 ಹೆಕ್ಟೇರ್ ವರೆಗೆ ಶೇ.90 ಹಾಗೂ ಸಾಮಾನ್ಯ ವರ್ಗದ ರೈತ ಕುಟುಂಬಗಳಿಗೆ ಶೇ.75ರಷ್ಟು ಮತ್ತು 2 ಹೆಕ್ಟೇರ್ ಮೇಲ್ಪಟ್ಟು 5 ಹೆಕ್ಟೇರ್ ವರೆಗೆ ಶೇ 45 ರಷ್ಟು ಸಹಾಯಧನ ನೀಡಲಾಗುತ್ತಿದೆ..

2. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಈ ಕೆಳಗಿನ ಚಟುವಟಿಕೆಗಳಿಗೆ ಸಹಾಯಧನವನ್ನು ಒದಗಿಸಲಾಗುತ್ತಿದೆ

| ಕಾರ್ಯಕ್ರಮ | ಶೇ. ಸಹಾಯ ಧನ | ಸಹಾಯಧನದ ಮೊತ್ತ |
|---|---|---|
| ವೈಯಕ್ತಿಕ ಕೃಷಿ ಹೊಂಡ (20ಮೀ*20ಮೀ*3ಮೀ) ನೀರಿನ ಸಂಗ್ರಹಣೆಗಾಗಿ | ಶೇ. 50 | ರೂ. 62.50 /ಘ.ಮೀ (ಗರಿಷ್ಟ ರೂ. 0.75 ಲಕ್ಷಗಳವರೆಗೆ) |
| ಸಮುದಾಯ ನೀರು ಸಂಗ್ರಹಣಾ ಘಟಕ (6000 ಘ.ಮೀ) (8000 ಘ.ಮೀ) | ಶೇ. 100 | ಗರಿಷ್ಟ 4.00 ಲಕ್ಷದವರೆಗೆ ಗರಿಷ್ಟ 5.32 ಲಕ್ಷದವರೆಗೆ |
| ನೀರು ಕೊಯ್ಲು ಘಟಕ (20*20*3) | ಶೇ. 50 | ರೂ. 0.75 ಲಕ್ಷಗಳು |
| ತರಕಾರಿ ಬೆಳೆಯಲ್ಲಿ ಪ್ಲಾಸ್ಟಿಕ್ ಹೊದಿಕೆ (ಗರಿಷ್ಟ 2 ಹೆಕ್ಟೇರ್ ವರೆಗೆ) | ಶೇ. 50 | ರೂ. 0.16 ಲಕ್ಷ/ ಹೆಕ್ಟೇರ್ ಗೆ |
| ಸೌರಶಾಖ ಘಟಕ ಉತ್ಪನ್ನಗಳನ್ನು ಒಣಗಿಸುವ ಸಲುವಾಗಿ | ಶೇ. 50 | ರೂ. 0.22 ಲಕ್ಷ/ 100 ಕೆ.ಜಿ. ಮತ್ತು ರೂ. 2.28 ಲಕ್ಷಗಳು/1000 ಕೆ.ಜಿ. ಸಾಮರ್ಥ್ಯದ ಘಟಕಕ್ಕೆ |

3. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಮತ್ತು ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿ ಹಲಸು, ಹುಣಸೆ, ದಾಳಿಂಬೆ, ನೇರಳೆ, ನೆಲ್ಲಿಕಾಯಿ ಹನುಮಾನ್‌ಫಲ, ಅಂಜೂರ, ತರಕಾರಿಗಳು ಮುಂತಾದ ಬೆಳೆಗಳನ್ನು ಬೆಳೆಯಲು ಪ್ರೋತ್ಸಾಹಧನ ನೀಡಲಾಗುತ್ತಿದೆ.

4. ರಾಜ್ಯದ ತೋಟಗಾರಿಕೆ ಹಾಗೂ ಕೃಷಿ ವಿಶ್ವವಿದ್ಯಾಲಯಗಳಲ್ಲಿ ತೋಟಗಾರಿಕೆ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹವಾಮಾನ ನಿರ್ದಿಷ್ಟ ವಲಯಗಳಲ್ಲಿ ಸಂಶೋಧನೆ ಹಾಗೂ ತಳಿ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಂಡು ಸಂಶೋಧನೆಯ ಫಲಶೃತಿಗಳನ್ನು ರೈತಾಪಿ ವರ್ಗಕ್ಕೆ ಕಾಲಕಾಲಕ್ಕೆ ಪ್ರಸರಿಸಲಾಗುತ್ತಿದೆ.

No. HORTI/595/HGM/2022

(ಮುನಿರತ್ನ)
ತೋಟಗಾರಿಕೆ ಮತ್ತು ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು